# ಚಿಂತನಧಾರೆ ಲೇಖನಗಳು – ಅಧ್ಯಾಯ ೦೧

## ಕನ್ನಡಾಭಿಮಾನದ ತಾತ್ವಿಕತೆ

– ಡಾ. ಬರಗೂರು ರಾಮಚಂದ್ರಪ್ಪ:

ಕನ್ನಡ ಅಭಿಮಾನವೆಂದರೆ ಕೇವಲ ಭಾಷೆಯಲ್ಲಿದ್ದರೆ ಸಾಲದು ಅದು ಕನ್ನಡತನವಾಗಿ ಹೊರಹೊಮ್ಮಬೇಕು ರಾಷ್ಟ್ರೀಯ ಅಂತರರಾಷ್ಟ್ರೀಯ ವಸ್ತು ವಿಶೇಷಗಳನ್ನು ಸ್ವೀಕರಿಸಿದರು ಸ್ಥಳೀಯ ಸಾಚಾತನವನ್ನು ಉಳಿಸಿಕೊಳ್ಳುವುದರಲ್ಲಿ ಕನ್ನಡತನ ಇದೆ ಯಾವುದೇ ಕ್ಷೇತ್ರ ವಸ್ತು ವಿನ್ಯಾಸ ಪ್ರಕಾರಗಳು ಇರಲಿ ಸ್ಥಳೀಯ ವಿಚಾರ ವಿವೇಕ  ಒಳಗೊಂಡ ಸಂವೇದನೆಯ ಸ್ವರೂಪದಲ್ಲಿ ಕನ್ನಡತನ ಇರಬೇಕು

ಒಂದು ಕಾಲದಲ್ಲಿ ಕನ್ನಡ ಚಲನ ಚಿತ್ರಗಳನ್ನು ಪ್ರದರ್ಶಿಸಿ ಕನ್ನಡ ಚಲನಚಿತ್ರಗಳನ್ನು ನೋಡಿ  ಎನ್ನುವುದೇ ಕನ್ನಡಾಭಿಮಾನ ವಾಗಿತ್ತು ಎಂತಹದ್ದೇ ಆದರೂ ಕನ್ನಡ ಪುಸ್ತಕ ಓದಿ ಎನ್ನುವುದು ಕನ್ನಡ ಅಭಿಮಾನ ವಾಗಿತ್ತು ಕನ್ನಡ ನಾಟಕ ನೋಡಿ ಎಂದರೆ ಅಭಿಮಾನ ಎನಿಸುತ್ತಿತ್ತು ಕನ್ನಡ ಚಲನಚಿತ್ರ ನಾಟಕ ಪುಸ್ತಕಗಳ ಸಂಖ್ಯೆ ಸಾಕಷ್ಟಿದೆ ಉತ್ತಮ ಅಭಿವೃದ್ಧಿಯ ಚಲನಚಿತ್ರಗಳು ನಾಟಕ ಪುಸ್ತಕಗಳ ಬೆಳವಣಿಗೆಗೆ ಕಾರಣವಾಗಿರುವುದು ಇಂದಿನ ಕನ್ನಡ ಅಭಿಮಾನ ವಾಗಬೇಕು ಕನ್ನಡ ಚಲನ ಚಿತ್ರಗಳಿಗೆ ಪ್ರೋತ್ಸಾಹ ಕೊಡಬೇಕೆಂದು ಅಶ್ಲೀಲ ಅರ್ಥದ ಮಾತುಗಳ ಚಿತ್ರವನ್ನು ನೋಡಿ ಕನ್ನಡಾಭಿಮಾನವನ್ನು ತೋರ ಬೇಕಾಗಿಲ್ಲ ವಿಕಾರಗಳನ್ನು ಪ್ರದರ್ಶಿಸದ ಕನ್ನಡ ಚಲನಚಿತ್ರಗಳಿಗೆ ಮಾರು ಹೋಗುವುದು ಕನ್ನಡ ಅಭಿಮಾನ ಅಲ್ಲ ದ್ವಂದ್ವಾರ್ಥ ಸಂಭಾಷಣೆಯ ನಾಟಕಕ್ಕೆ ಚಪ್ಪಾಳೆ ತಟ್ಟುವುದು ಕಡಿಮೆಬೆಲೆಯ ಪುಸ್ತಕ ನಾಟಕ ಚಿತ್ರ ಪತ್ರಿಕೆ ಪೋಸ್ಟರ್ ಗಳಿಗೆ ಪ್ರೋತ್ಸಾಹ ಕೊಡುವುದು ಕನ್ನಡತನದ ಕೆಲಸವಲ್ಲ ಇಂದಿನ ಕನ್ನಡ ಅಭಿಮಾನವೂ ವಿವೇಕ ವಿಚಾರಗಳನ್ನು ಒಳಗೊಂಡ ಸಂವೇದನೆಯ ಆಕಾರವಾಗಿ ತಗೊಳ್ಳಬೇಕು ಕನ್ನಡದ ಹೊರಗಿನ ದಬ್ಬಾಳಿಕೆಗೆ ಪ್ರತಿರೋಧ ಒಡ್ಡುವುದು ಅಷ್ಟೇ ಅಲ್ಲ ಒಳಗಿನ ವಿಕೃತಿಗಳಿಗೆ ವಿರೋಧ ಆಗುವುದು ಕನ್ನಡ ಅಭಿಮಾನದ ತಾತ್ವಿಕ ನೆಲೆಯಾಗಬೇಕು ನಾದ ಕನ್ನಡ ಮತ್ತು ಕರ್ನಾಟಕದ ಮರ್ಯಾದೆ ಉಳಿಯುತ್ತದೆ ಕನ್ನಡ ನಾಡು ಶ್ರೀಗಂಧದ ನಾಡು ಎಂದು ವೈಭವೀಕರಿಸಲಾಗಿದೆ ಕರ್ನಾಟಕದ ಬಹುಪಾಲು ಜನರು ಶ್ರೀಗಂಧವನ್ನು ನೋಡಲು ಸಾಧ್ಯವೇ ಆಗಿಲ್ಲ ಹಾಗಿದ್ದರೆ ಶ್ರೀಗಂಧದ ಇಲ್ಲದೆ ಇರುವ ನಾಡು ಕನ್ನಡನಾಡಲ್ಲವೇ ಕನ್ನಡನಾಡಿನಲ್ಲಿ ಶ್ರೀಗಂಧವು ಇದೆ ಜಾಲಿಯ ಮರವು ಇದೆ ಕೋಗಿಲೆಯು ಇದೆ ಹರಿಯುವ ನದಿಗಳು ಇವೆ ಬತ್ತಿದ ಕೆರೆಗಳು ಇವೆ ವೈಭವೋಪೇತ ಸೌಧ ಗಳಿವೆ ಸೊರಗಿದ ಗುಡಿಸಲುಗಳು ಇವೆ ತುಂಬಿದ ಕಡಲು ಇದೆ ಹಸುರಿನ ಕಾಡಿದೆ ಒಣಗಿದ ಊರಿದೆ ಕೃಷ್ಣ ಕಾವೇರಿ ಇದ್ದಾರೆ ನೀರಿಲ್ಲದ ಹಳ್ಳಿಗಳು ಇವೆ ಬಿರುಕುಬಿಟ್ಟ ಕೆರೆಗಳು ಇವೆ ಕನ್ನಡ ಕರ್ನಾಟಕವೆಂದರೆ ಇವೆಲ್ಲವೂ ಮುಖ್ಯ ನಮ್ಮದು ಹೇಗೆ ಶ್ರೀಗಂಧದ ಕರ್ನಾಟಕವು ಹಾಗೆ ಜಾಲಿಯ ಹೊಂಗೆಮರದ ಕರ್ನಾಟಕ ಹೇಗೆ ಕೋಗಿಲೆಗಳ ಕರ್ನಾಟಕ ಹಾಗೆಯೇ ಕಾಗೆಗಳ ಕರ್ನಾಟಕ ತುಂಬಿದ ಕಡಲ ಕರ್ನಾಟಕ ಹಸಿದ ಒಡಲು ಗಳ ಕರ್ನಾಟಕ ನಮ್ಮದು ಕಾವೇರಿ ಕೃಷ್ಣೆಯ ಕರ್ನಾಟಕ ಹೌದು ಕೆರೆಗಳ ಕರ್ನಾಟಕ ಹೌದು ಇವೆಲ್ಲವನ್ನೂ ಬಿಟ್ಟು ಹುಸಿ ವೈಭವಿಕರಣ ದಲ್ಲಿ ಗತವೈಭವದ ಗಾಣದಲ್ಲಿ ಜಡವಾಗುವ ಮನೋಧರ್ಮವನ್ನು ರೂಪಿಸುವುದು ಕನ್ನಡಭಿಮಾನ ಅಲ್ಲ ಬೇದಭಾವ ಗಳಿಲ್ಲದ ಕರ್ನಾಟಕವನ್ನು ಕಾಣುವುದು ಕನ್ನಡ ಅಭಿಮಾನದ ಒಳನೋಟ ವಾಗಬೇಕು

ಇಂದು ನಮ್ಮ ನಾಡಿನಲ್ಲಿ ಕನ್ನಡ ಬಂದ ಉಳಿಸಿಕೊಂಡಿರುವ ಗ್ರಾಮೀಣ ಜನರು ಹಾಗೂ ಹಳ್ಳಿ ನಗರಗಳ ಬಡವರು ಕನ್ನಡವನ್ನು ಉಸಿರಾಗಿಸಿಕೊಂಡಿರುವ ಬಡವರ ಉನ್ನತಿಯಲ್ಲಿ ಕನ್ನಡ ಅಭಿಮಾನದ ವಿಚಾರಗಳು ವಿಕಾಸವಾಗಬೇಕು ಕರ್ನಾಟಕದ ಬಲ್ಲಿದರ ನೆಲೆಯಿಂದ ಬೆಳೆಯುವ ಕನ್ನಡ ಅಭಿಮಾನವು ರಾಜಮಹಾರಾಜರ

ವೈಭವ ಯುದ್ಧೋನ್ಮಾದ ಹುಸಿ ವೀರತನ ಗಳನ್ನು ಒಳಗೊಂಡು ನಾಡನ್ನು ಕಟ್ಟಿದ ಬಡವರ ಬೆವರಿನ ಹನಿಯನ್ನು ನಿರ್ಲಕ್ಷಿಸುವುದು ಆಗಬಾರದು ಕೋಟೆ ಕೊತ್ತಲಗಳನ್ನು ಗುಡಿಗೋಪುರಗಳನ್ನು ಬೆವರು ಬಸಿದು ಕಟ್ಟಿದ ಕನ್ನಡಿಗರನ್ನು ಮರೆತು ಕೇವಲ ಕಟ್ಟಿಸಿದ ರಾಜ ಮಹಾರಾಜರನ್ನು ಮೆರೆಸುವುದು ಕನ್ನಡ ಸಂಸ್ಕೃತಿಯ ಆಗಬಾರದು ಇದೇ ಕರ್ನಾಟಕದ ಚರಿತ್ರೆ ಆಗಬಾರದು ಕಟ್ಟಿದವರನು ಒಟ್ಟಿಗೆ ಗ್ರಹಿಸುತ್ತ ಕಟ್ಟಿಕೊಡುವುದು ನಿಜವಾದ ಚರಿತ್ರೆ ಕನ್ನಡ ಅಭಿಮಾನವು ಇಂತಹ ಚರಿತ್ರೆಯನ್ನು ತನ್ನದಾಗಿಸಿಕೊಂಡು ಬೆಳೆಯಬೇಕೆಂದು ಜನರು ರಾಜರನ್ನು ಮೆರೆಸುತ್ತ ಹೋಗಬಾರದು ಉತ್ತಮ ರಾಜರು ಮತ್ತು ಜನರು ಈ ನಾಡಿನ ಇತಿಹಾಸವನ್ನು ನಿರ್ಮಿಸಿದ ನೆಲೆಗಳು ಎಂಬ ಅರಿವು ಅತ್ಯಗತ್ಯ

ಭಾರತ ಹೇಗೆ ಏಕಮುಖಿ ಸಂಸ್ಕೃತಿಯನ್ನು ಪಡೆದಿಲ್ಲವೋ ಹಾಗೆಯೇ ಕರ್ನಾಟಕವು ಏಕಮುಖಿ ಸಂಸ್ಕೃತಿಯನ್ನು ಪಡೆದಿಲ್ಲ ನಮ್ಮ ದೇಶ ಬಹುಸಂಸ್ಕೃತಿಗಳ ದೇಶ ಪ್ರತಿ ರಾಜ್ಯಗಳಲ್ಲೂ ಬಹುಸಂಸ್ಕೃತಿ ಗಳಿವೆ ಕರ್ನಾಟಕವು ಇದಕ್ಕೆ ಹೊರತಾಗಿಲ್ಲ ನಮ್ಮಲ್ಲಿ ಒಂದೇ ಒಂದು ಮತ ಇಲ್ಲ ಒಂದು ಧರ್ಮವಿಲ್ಲ ಒಂದೇ ಜೀವನ ವಿಧಾನವಿಲ್ಲ ಒಂದೇ ಮಾದರಿಯ ಚರಿತ್ರೆ ಪುರಾಣಗಳಿಂದ ನಗರದ ಜನರಿದ್ದಾರೆ ಗ್ರಾಮೀಣ ಜನರಿದ್ದಾರೆ ಗ್ರಾಮ ನಗರಗಳನ್ನು ಕಾಣದ ಬುಡಕಟ್ಟುಗಳ ಜನರಿದ್ದಾರೆ ಅಲೆಮಾರಿಗಳು ಇದ್ದಾರೆ ಅವರನ್ನು ಒಳಗೊಂಡದ್ದು ಕರ್ನಾಟಕ ಕನ್ನಡವನ್ನು ಇಡೀ ಕರ್ನಾಟಕದ ಆಡಳಿತಾತ್ಮಕ ಏಕತ್ರವಾಗಿ ಸ್ವೀಕರಿಸುತ್ತಲೇ ಸಾಂಸ್ಕೃತಿಕ ವೈವಿಧ್ಯತೆಯನ್ನು ಗೌರವಿಸುವುದು ನಮ್ಮ ಕನ್ನಡ ಅಭಿಮಾನದ ವಿವೇಕ ಆಗಬೇಕು ಕನ್ನಡದ ಕೆಲಸ ಎಂದರೆ ಏಕಮುಖಿ ಕೆಲಸವಲ್ಲ ಅದು ಬಹುಮುಖ್ಯ ಕೆಲಸ ಚಲನಶೀಲ ಚಿಂತನಶೀಲ ಪ್ರಕ್ರಿಯೆ ಕನ್ನಡ ಅಭಿಮಾನ ಚಲನಶೀಲ ವಾಗಿರಬೇಕು ಮತ್ತು ಚಿಂತನಾಶೀಲ ವಾಗಿರಬೇಕು ಬಹುಮುಖಿಯಾದ ಕನ್ನಡದ ಕೆಲಸಗಳಿಗೆ ಆದ್ಯತೆಯನ್ನು ಗುರುತಿಸಿಕೊಳ್ಳಬೇಕು ನಮ್ಮಲ್ಲಿ ಕಾಲಮಾನದ ಹಿಂದಿನ ಆದ್ಯತೆಗಳೇ ಇಂದಿನ ಆದ್ಯತೆಗಳು ಆಗಿರುವುದು ಹೋದ ದೊಡ್ಡ ವಿಪರ್ಯಾಸ ಪಟ್ಟಿ ಮಾಡಿದರೆ ಆದರಲ್ಲಿ ಅಡಕವಾಗುವ ಹತ್ತಾರು ಕೆಲಸಗಳಲ್ಲಿ ಕನ್ನಡದ ಕೆಲಸಗಳೇ ಆಗಿರುತ್ತವೆ ಇರುತ್ತವೆ ಆದರೆ ಅತಿ ಮುಖ್ಯವಾದದ್ದು ಯಾವುದು ಎಂದು ಗುರುತಿಸುವ ವಿವೇಕವು ಬೇಕು

ಕನ್ನಡಾಭಿಮಾನ ವೆಂದರೆ ಪೀಳಿಗೆಯಿಂದ ಪೀಳಿಗೆಗೆ ಕನ್ನಡವನ್ನು ಕೊಂಡೊಯ್ಯುವ ಒಂದು ಪರಂಪರೆ ಕೇವಲ ಕಂಠದಲ್ಲಿ ಹುಟ್ಟಿ ಅಲ್ಲಿಯೇ ಅಂತ್ಯವಾಗುವ ಕೂಗು ಕನ್ನಡವನ್ನು ಬೆಳೆಸುವುದಿಲ್ಲ ಒಂದು ಕಾಲಘಟ್ಟದಲ್ಲಿ ಕನ್ನಡವನ್ನು ಉಳಿಸುವುದಕ್ಕೆ ಇಂತಹ ಕೂಗು ಸಹಕಾರಿಯಾಗಿತ್ತು ನಿಜ ಆದರೆ ಇಂದು ನಾವು ಅಲ್ಲಿಯೇ ನಿಲ್ಲಬೇಕಾಗಿಲ್ಲ ನಮ್ಮ ಕನ್ನಡಕ್ಕೆ ಕಂಠದ ಕೂಗಬೇಕು ಆದರೆ ಕೇವಲ ಕಂಠ ಕೂಗಾಗುವುದು ಬೇಡ ಕೇವಲ ಕಂಠದಲ್ಲಿ ಉಳಿಯುವ ಕೂಗುಗಳು ಕನ್ನಡದ ಬಾಹ್ಯ ಸಂಕೇತಗಳನ್ನು ವಿಜೃಂಭಿಸುತ್ತವೆ ಕನ್ನಡ ಅಭಿಮಾನ ಎಂದರೆ ಕೇವಲ ಹೊರಗಡೆ ಕಾಣಿಸುವ ಕನ್ನಡದ ಅಂಕಿ ಅಕ್ಷರಗಳಂತೆ ಎಂದು ಪ್ರಚುರ ಪಡಿಸುತ್ತವೆ ಅಕ್ಷರಗಳು ಅಂತರಂಗ ಆಗಬೇಕು ಎಂಬ ಕಾಳಜಿಯಿಂದ ಕನ್ನಡ ಅಭಿಮಾನ ಬೆಳೆದಾಗ ಕನ್ನಡ ಅಭಿಮಾನಕ್ಕೆ ಜೀವಶಕ್ತಿ ಒದಗುತ್ತದೆ ಅಂತರಂಗ–ಬಹಿರಂಗ ಗಳಲ್ಲಿ ಒಂದಾದ ಕನ್ನಡತನ ರೂಪುಗೊಳ್ಳುತ್ತದೆ ನಾವು ಹೊರಗೆ ಎದ್ದುಕಾಣುವ ಸಾಂಕೇತಿಕ ಕನ್ನಡದ ಕೆಲಸಗಳ ಬಗ್ಗೆ ಮಾತನಾಡಬೇಕು ಆದರೆ ಅಲ್ಲಿಯೇ ನಿಲ್ಲಬಾರದು ಕಾರಣವಾಗಬಾರದು ಸಾಂಕೇತಿಕ ಕೆಲಸಗಳನ್ನು ಒಳಗೊಳ್ಳುತ್ತದೆ ಅವನು ನೀಡಿದ ಕನ್ನಡಾಭಿಮಾನದ ಭಾಷೆ ಪರಿಭಾಷೆಗಳು ನಮ್ಮದಾಗಬೇಕು ನಾವು ಆಡುವ ಮಾತುಗಳು ಕನ್ನಡ ಪರ ಮಾತುಗಳು ಕೇವಲ ಕಂಠದ ಕೂಗು ಆಗುವುದಿಲ್ಲ ಈ ಕೂಗಿನಲ್ಲಿ ನೈಜ ಕಾಳಜಿ ಕಳಕಳಿ ಇರುತ್ತದೆ ಒಂದು ಧ್ವನಿ ಆಗುತ್ತದೆ ಧ್ವನಿ ಯಾಗುತ್ತಾ ಹೋಗುತ್ತದೆ

**ಸಂಭವನೀಯ ಪ್ರಶ್ನೆಗಳು**

೧. ಯಾವ ಯಾವುದರಲ್ಲಿ ಕನ್ನಡತನ ಇರಬೇಕೆಂದು ಲೇಖಕರು ಆಶಿಸುತ್ತಾರೆ?

೨. ಕನ್ನಡ ನಾಡಿನಲ್ಲಿ ಕಂಡುಬರುವ ಶ್ರೀಗಂಧ ಜಾಲಿ ಕೋಗಿಲೆ ಅವರನ್ನೊಳಗೊಂಡ ಕಾಡು ಹಸಿರಿನ ನಾಡನ್ನು ಕುರಿತು ನಿರೂಪಿಸಿ

೩. ಕನ್ನಡ ಉಳಿದಿರುವುದು ಗ್ರಾಮೀಣರಲ್ಲಿ ಮತ್ತು ಬಡವರಲ್ಲಿ ಲೇಖಕರ ಹೇಳಿಕೆಯನ್ನು ವಿವರಿಸಿ

೪. ಭಾರತ ಹೇಗೆ ಬಹುಸಂಸ್ಕೃತಿಗಳ ದೇಶ ವಿವೇಚಿಸಿ

೫. ಕರುಳಿನ ಕನ್ನಡ ಇದ್ದ ಬೇಕಾಗಿದೆ ಕೊರಳಿನ ಕನ್ನಡವಲ್ಲ ಈ ಸಾಲುಗಳನ್ನು ವಿಚಾರಮಾಡಿ

೬. ಕನ್ನಡ ಅಭಿಮಾನದ ತಾತ್ವಿಕತೆ ಲೇಖನದ ಸಾರಾಂಶವನ್ನು ನಿರೂಪಿಸಿ